# ಸಂತ ಜ್ಞಾನದೇವ

**ಜಿ.ವಿ. ಹೆಗಡೆ**

ಮಹಾರಾಷ್ಟ್ರದ ಸಂತಶ್ರೇಷ್ಠರಲ್ಲಿ ಬೆಳಗುವ ಮಹಾಜ್ಯೋತಿಯೇ ಜ್ಞಾನದೇವ. ಜ್ಞಾನ-ಭಕ್ತಿಗಳಿಗೆ ಹೆಸರಾದ ಈ ಸಂತರ ಬದುಕೇ ಒಂದು ಅದ್ಭುತ. ಅವರ ಜ್ಞಾನೇಶ್ವರಿ, ಅಭಂಗಗಳು ಇಂದಿಗೂ ಮನೆಮಾತಾಗಿವೆ. ಈ ಕುರಿತು ಬರೆದಿರುವ ಲೇಖಕರು ಮೈಸೂರು ಆಶ್ರಮದ ಭಕ್ತರು. ಕೆನರಾ ಬ್ಯಾಂಕಿನ ನಿವೃತ್ತ ಅಧಿಕಾರಿಗಳಾಗಿದ್ದ ಅವರು, ಅನೇಕ ಸೇವಾಕಾರ್ಯಗಳಲ್ಲಿ ನಿರತರಾಗಿದ್ದಾರೆ.

ಅಗೋ ! ಅದೇ ಆಳಂದಿಯ ಪ್ರಸಿದ್ಧ ಸಿದ್ಧೇಶ್ವರ ಮಂದಿರ. ಸನಿಹದಲ್ಲಿ ದೇವಗಂಗೆಯಂತೆ ಹರಿಯುವ ಪವಿತ್ರ ನದಿ ಇಂದ್ರಾಯಣಿ. ನೋಡಿ! ಅಲ್ಲಿ ಸೇರಿದ ಅಪಾರ ಜನಸಾಗರ! ತಾಳ, ಮೃದಂಗದ ಮಧುರ ನಾದ. ತಂಬೂರಿಯ ಝೇಂಕಾರ. ಲಯಬದ್ಧವಾಗಿ ಕುಣಿಯುತ್ತಾ, ಭಜನೆ ಹಾಡುತ್ತಾ, ಆನಂದ ಸಾಗರದಲ್ಲಿ ವಿಹರಿಸುತ್ತಾ, ಶಿಸ್ತುಬದ್ಧವಾಗಿ ಸಾಗುತ್ತಿರುವ ಭಕ್ತವೃಂದ. ಒಮ್ಮೊಮ್ಮೆ ಜೋರಾಗಿ ಮೊಳಗುವ ಘೋಷಣೆಗಳು ! ಕೆಲವರ ಕೈಯಲ್ಲಿ ಭಗವಾ ಧ್ವಜಗಳು. ಹಿರಿಯ-ಕಿರಿಯ, ಹೆಣ್ಣು-ಗಂಡು, ಜಾತಿ-ಮತ ಭೇದವಿಲ್ಲದೆ ಎಲ್ಲರೂ ಒಂದೇ ಕುಟುಂಬದ ಸದಸ್ಯರಂತೆ ಸಾಗುತ್ತಿರುವ ಸಂಭ್ರಮ ! 'ಜಯ್ ವಿಠಲ್ - ಹರಿ ವಿಠಲ್' ನಾಮಸ್ಮರಣೆ. ಮಧ್ಯದಲ್ಲೊಂದು ಸುಂದರವಾಗಿ ಶೃಂಗರಿಸಲ್ಪಟ್ಟ ಪಲ್ಲಕ್ಕಿ. ಅದರಲ್ಲಿ ಒಂದು ಜೊತೆ ಸುಂದರ ಪಾದುಕೆಗಳು. ಪಲ್ಲಕ್ಕಿ ಹೊತ್ತ ಯುವಕರಿಂದ ಆಗಾಗ 'ಸಂತ್ ಜ್ಞಾನದೇವ ಮಹಾರಾಜ್ ಕಿ ಜೈ' ಘೋಷ ! ಒಡನೆಯೇ ಎಲ್ಲರಿಂದಲೂ ಅದೇ ಮಾರ್ದನಿ. ಒಂದು ಅದ್ಭುತ ಆಧ್ಯಾತ್ಮಿಕ ಭಕ್ತಿಮಯ ವಾತಾವರಣ. ಎಲ್ಲಿಗೆ ಈ ಭಜಕರ ಪಯಣ? ಇವರೆಲ್ಲರ ಗೌರವ, ಭಕ್ತಿಗೆ ಪಾತ್ರನಾದ ಆ ಮಹಾತ್ಮನಾದರೂ ಯಾರು ?




* * *

ಧರ್ಮವು ಕಾಂತಿಹೀನವಾಗಿ, ಅಧಾರ್ಮಿಕರ ಅಟ್ಟಹಾಸ ಹೆಚ್ಚಿದಾಗ, ಮಹಾಪುರುಷರು ಆಗಾಗ ಅವತಾರವೆತ್ತಿ ಬಂದು ಧರ್ಮದ ಪುನರುತ್ಥಾನವಾಗಿ, ಸಾತ್ವಿಕ ಜೀವಿಗಳಿಗೆ ಅಭಯ ಸಿಗುವುದು ದೈವ ಸಂಕಲ್ಪ. ಇದು ನಮ್ಮ ದೇಶದಲ್ಲಿ ನಡೆಯುತ್ತಲೇ ಬಂದಿದೆ. ಹೀಗೆ ೧೩ನೇ ಶತಮಾನದಲ್ಲೂ ಬಹಳ ಮಂದಿ ಮಹಾಪುರುಷರ ಅವತಾರವಾಯಿತು. ಅದರಲ್ಲೂ ಹೆಚ್ಚಿನ ಮಹಾಪುರುಷರ ಆಗಮನವಾದುದು ಈಗಿನ ಮಹಾರಾಷ್ಟ್ರ ಪ್ರಾಂತದಲ್ಲಿ. ಭಕ್ತಿಪಂಥವನ್ನು ಜನಪ್ರಿಯಗೊಳಿಸಿದವರೂ ಈ ಸಂತರೇ.

ಅಲ್ಲಿಯ ಗೋದಾವರಿ ತೀರದ ಪೈಠಣ ಕ್ಷೇತ್ರವು ಆಗ ಕಾಶಿಯಷ್ಟೇ ಪ್ರಸಿದ್ಧವಾಗಿತ್ತು. ಅಲ್ಲಿ ಹಲವಾರು ವಿದ್ವಾಂಸರು, ವೇದಪಾರಂಗತ ಬ್ರಾಹ್ಮಣ ಕುಟುಂಬಗಳು ತಲತಲಾಂತರದಿಂದ ವಾಸಿಸುತ್ತಿದ್ದವು. ಇಲ್ಲಿಯೇ ಸಮೀಪದ ಆಪೇಗಾಂವ್ ಎಂಬಲ್ಲಿ ಗೋವಿಂದ ಪಂತನೆಂಬ ಧರ್ಮನಿಷ್ಠ ಬ್ರಾಹ್ಮಣನು, ಪರಮಸಾಧ್ವಿಯೂ, ಪತಿಪರಾಯಣೆಯೂ ಆದ ನೀರಾದೇವಿ ಎಂಬ ಪತ್ನಿಯೊಂದಿಗೆ ಸಾತ್ವಿಕ ಜೀವನ ನಡೆಸುತ್ತಿದ್ದನು. ಬಹಳ ಕಾಲವಾದರೂ ಮಕ್ಕಳಿಲ್ಲದ ಕೊರತೆ ಇವರನ್ನು ಬಾಧಿಸುತ್ತಿತ್ತು. ಕೊನೆಗೂ ಸಾಧುಗಳೊಬ್ಬರ ಆಶೀರ್ವಾದದಿಂದ ಗೋವಿಂದ ಪಂತನ ೫೫ನೇ ವಯಸ್ಸಿನಲ್ಲಿ ಗಂಡು ಮಗುವೊಂದು ಜನಿಸಿದಾಗ ದಂಪತಿಗಳ ಹಿಗ್ಗು ಹೇಳತೀರದು. ಇಷ್ಟದೈವ ವಿಠ್ಠಲನ ಹೆಸರನ್ನೇ ಮಗುವಿಗೆ ಇಟ್ಟರು. ದಷ್ಟಪುಷ್ಟವಾದ ಮಗು ಸರ್ವಲಕ್ಷಣಸಂಪನ್ನವಾಗಿ, ಎಲ್ಲರ ಕಣ್ಮಣಿಯಾಗಿತ್ತು.

ಬಾಲ್ಯದಿಂದಲೇ ವಿಠ್ಠಲನು ಮಾತಾಪಿತರಿಂದ ಉತ್ತಮ ಸಂಸ್ಕಾರಗಳನ್ನೂ, ದೈವಭಕ್ತಿಯನ್ನೂ ಮೈಗೂಡಿಸಿಕೊಂಡನು. ಬ್ರಾಹ್ಮಣರಿಗೆ ಉಚಿತವಾದ ಎಲ್ಲ ಶಾಸ್ತ್ರ ಜ್ಞಾನವನ್ನು ಬಲು ಬೇಗನೆ ಗಳಿಸಿಕೊಂಡನು. ಮೊದಲಿನಿಂದಲೇ ಅವನಲ್ಲಿ ಐಹಿಕ ಭೋಗಗಳ ಕಡೆ ವೈರಾಗ್ಯಭಾವನೆಯೂ, ಆಧ್ಯಾತ್ಮಿಕತೆಯತ್ತ ವಿಶೇಷ ಒಲವೂ ಇತ್ತು. ಸಂನ್ಯಾಸಿಯಾಗಬೇಕೆಂಬ ಹಂಬಲವೂ ಆಗಾಗ ಮನದಲ್ಲಿ ಮೂಡುತ್ತಿತ್ತು. ಹೀಗಿರಲು ವಿದ್ಯಾಭ್ಯಾಸ ಮುಗಿಯಿತು. ವಿದ್ಯಾಭ್ಯಾಸ ಮುಗಿದ ಮೇಲೆ, ಪದ್ಧತಿಯಂತೆ ತಂದೆ ತಾಯಿಗಳ ಅನುಮತಿ ಪಡೆದು

ಅನೇಕ ತೀರ್ಥಕ್ಷೇತ್ರಗಳ ಯಾತ್ರೆ ಮುಗಿಸಿದ ವಿಠ್ಠಲನು ಊರಿಗೆ ಹಿಂದಿರುಗುವ ದಾರಿಯಲ್ಲಿ ಆಳಂದಿ ಕ್ಷೇತ್ರವನ್ನು (ಇತರ ಆಳಂದಿಗಳಿಂದ ಪ್ರತ್ಯೇಕಿಸಲು ಇದನ್ನು ದೇವಾಚಿ ಆಳಂದಿ ಎಂದು ಕರೆಯುತ್ತಾರೆ) ತಲುಪಿದನು. ಅಲ್ಲಿ ಸಿದ್ಧೋ ಪಂತರೆಂಬ ಸಂಪ್ರದಾಯಸ್ಥ ಬ್ರಾಹ್ಮಣರೊಬ್ಬರಿಗೆ ಈ ತೇಜಸ್ವಿ ಯುವಕನ ಪರಿಚಯವಾಯ್ತು. ಅವರಿಗೆ ರುಕ್ಮಿಣಿ (ಮೀನಾಕ್ಷಿ) ಎಂಬ ಸುಶೀಲೆ ಮಗಳಿದ್ದಳು. ಯುವಕನ ಪಾಂಡಿತ್ಯ, ವಿನಯಶೀಲತೆ, ಗಾಂಭೀರ್ಯಗಳಿಂದ ಪ್ರಭಾವಿತರಾದ ಅವರು ತಮ್ಮ ಮಗಳಿಗೆ ಈತ ಸೂಕ್ತ ವರ ಎಂದು ಭಾವಿಸಿದರು. ವಿಠ್ಠಲನಲ್ಲಿ ತಮ್ಮ ಇಂಗಿತವನ್ನು ಪ್ರಸ್ತಾಪಿಸಿದರು. ಆದರೆ ವೈರಾಗ್ಯಶೀಲ ವಿಠ್ಠಲನಿಗೆ ವಿವಾಹದಲ್ಲಿ ಆಸಕ್ತಿಯೆಲ್ಲಿ? ಅವರ ಪ್ರಸ್ತಾಪವನ್ನು ವಿನಯದಿಂದಲೇ ತಿರಸ್ಕರಿಸಿದನು. ಆದರೆ ದೈವ ಸಂಕಲ್ಪ ಬೇರೆಯೇ ಇತ್ತು. ಅದೇ ರಾತ್ರಿ ಕನಸಿನಲ್ಲಿ ವಿಠ್ಠಲನಿಗೆ ಪರಮಾತ್ಮನ ದರ್ಶನವಾಯಿತು. ಅದೇ ಕನ್ಯೆಯಿಂದ ನಿನ್ನ ಮನೆಯಲ್ಲಿ ನಾಲ್ಕು ಮಹಾಪುರುಷರ ಅವತಾರವಾಗಲಿದೆ. ಆದ್ದರಿಂದ ಧರ್ಮಿಷ್ಠಳೂ, ಭಗವದ್ಭಕ್ತಳೂ ಆದ ರುಕ್ಮಿಣಿಯನ್ನು ತಿರಸ್ಕರಿಸಬೇಡ ಎಂದು ಆದೇಶವಾಯಿತು. ಭಗವಂತನ ಸಂಕಲ್ಪವೇ ಗೆದ್ದಿತು. ವಿಠಲನು ವಿವಾಹಕ್ಕೆ ಒಪ್ಪಿಗೆಯಿತ್ತನು. ಸಿದ್ಧೋ ಪಂತರು ಸಂತಸಪಟ್ಟರು. ಎಲ್ಲರ ಸಮ್ಮತಿಯೊಂದಿಗೆ ವಿವಾಹ ಕಾರ್ಯವು ಸಾಂಗವಾಗಿ ನಡೆಯಿತು. ಕೆಲಕಾಲ ಮಾವನ ಮನೆಯಲ್ಲೇ ಉಳಿದ ವಿಠ್ಠಲನು ನಂತರ ಸ್ವಂತ ಊರು ಆಪೇಗಾಂವ್‌ಗೆ ಪತ್ನಿಯೊಂದಿಗೆ ಹಿಂದಿರುಗಿದನು. ಗೋವಿಂದ ಪಂತನೂ, ನೀರಾಬಾಯಿಯೂ ತುಂಬಾ ಸಂತೋಷಪಟ್ಟರು. ಮಗ ಸೊಸೆಯರನ್ನು ತುಂಬಾ ಪ್ರೀತಿಯಿಂದ ನೋಡಿಕೊಂಡರು.

ಆದರೆ ಸಂತೋಷ, ನೆಮ್ಮದಿ ಬಹಳ ಕಾಲ ಉಳಿಯಲಿಲ್ಲ. ವಯೋಮಾನಕ್ಕನುಗುಣವಾಗಿ ಗೋವಿಂದಪಂತನೂ, ಅವನ ಸಹಧರ್ಮಿಣಿಯೂ ಕಾಲವಾದರು. ವಿಠ್ಠಲನಾದರೋ ಮೊದಲಿನಿಂದಲೇ ಸಂಸಾರದಲ್ಲಿ ಆಸಕ್ತಿ ಹೊಂದಿರಲಿಲ್ಲ. ಅವನಿಗೆ ಸಂಸಾರದ ಭಾರ ಬೇಸರವೆನಿಸಿತು. ಮನೆಯ ಕಾರ್ಯಭಾರಗಳನ್ನು ನಿರ್ಲಕ್ಷಿಸಿ, ತನಗೆ ಪ್ರಿಯವಾದ ಪರಮಾರ್ಥದ ಕಡೆಗೇ ಗಮನ ಕೊಡತೊಡಗಿದನು. ರುಕ್ಮಿಣಿದೇವಿಯಿಂದ ಎಲ್ಲ ಸಮಾಚಾರಗಳನ್ನು ತಿಳಿದ ಸಿದ್ಧೋ ಪಂತನು, ಮಗಳನ್ನೂ, ಅಳಿಯನನ್ನೂ ಮತ್ತೆ ಆಳಂದಿಗೇ ಕರೆಸಿಕೊಂಡನು. ಸಂಸಾರದ ಜವಾಬ್ದಾರಿ ತೊಲಗಿ, ದೇವದರ್ಶನ, ಸಂತರ ಸತ್ಸಂಗ, ಆಧ್ಯಾತ್ಮಿಕ ಸಾಧನೆಗಳಿಗೆ ಸಿಕ್ಕಿದ ಅವಕಾಶದಿಂದ ವಿಠ್ಠಲನು ಸಂತಸಗೊಂಡು ನೆಮ್ಮದಿಯಿಂದ ಇರಲಾರಂಭಿಸಿದನು.

ವರ್ಷಗಳೇ ಉರುಳಿದರೂ ದಂಪತಿಗಳಿಗೆ ಸಂತಾನ ಪ್ರಾಪ್ತಿಯಾಗಲಿಲ್ಲ. ಒಂದು ಮಗುವಾದ ಕೂಡಲೇ ಸಂಸಾರ ತ್ಯಾಗ ಮಾಡಿ ಸಂನ್ಯಾಸ ಪಡೆಯುವ ಹಂಬಲದಲ್ಲಿದ್ದ ವಿಠ್ಠಲನಿಗೆ ತನಗಾದ ಸ್ವಪ್ನದರ್ಶನದ ಬಗ್ಗೆಯೇ ಸಂಶಯ ಮೂಡಿತು. ಇನ್ನು ತಮಗೆ ಸಂತಾನ ಪ್ರಾಪ್ತಿಯಾಗದು. ಹಾಗಾಗಿ ಇನ್ನು ಕಾಯುವುದು ಅರ್ಥಹೀನ. ತನ್ನ ಸಂಸಾರ ತ್ಯಾಗಕ್ಕೆ ಒಪ್ಪಿಗೆ ನೀಡುವಂತೆ ಹೆಂಡತಿಯನ್ನು ಪದೇ ಪದೇ ಅಂಗಲಾಚತೊಡಗಿದನು. ಯಾವ ಹೆಣ್ಣು ತಾನೇ ಗಂಡ ಸಂನ್ಯಾಸಿಯಾಗಲು ಅನುಮತಿ ನೀಡಿಯಾಳು? ವಿಠ್ಠಲನ ವೈರಾಗ್ಯ ಹೆಚ್ಚುತ್ತಲೇ ಇತ್ತು. ಕೊನೆಗೊಂದು ದಿನ ಅವಳು ಬೇಸರದಿಂದ , 'ನಿಮ್ಮಿಷ್ಟದಂತೆ ಮಾಡಿ' ಎಂದಿದ್ದನ್ನೇ ಅನುಮತಿ ಎಂದು ಪರಿಗಣಿಸಿ, ಕಾಶಿಗೆ ಹೊರಟೇ ಬಿಟ್ಟನು. ಕಾಶಿಯಲ್ಲಿ ಸ್ವಾಮಿ ರಾಮಾನಂದರನ್ನು ಕಂಡು ಸಂನ್ಯಾಸ ದೀಕ್ಷೆಗಾಗಿ ಪ್ರಾರ್ಥಿಸಿದನು. ತನಗೆ ಯಾವುದೇ ಸಾಂಸಾರಿಕ ಜವಾಬ್ದಾರಿಗಳಿಲ್ಲವೆಂದೂ, ತನ್ನವರಾರೂ ಇಲ್ಲವೆಂದೂ, ತನಗೆ ಭೋಗಜೀವನದಿಂದ ಮುಕ್ತಿ ಬೇಕೆಂದೂ ಕೇಳಿಕೊಂಡ ಈ ತೇಜಸ್ವೀ ತರುಣನ ವ್ಯಾಕುಲತೆಯನ್ನೂ ದೃಢನಿರ್ಧಾರವನ್ನೂ ಮೆಚ್ಚಿ , ದೀಕ್ಷೆಯಿತ್ತು ಶಿಷ್ಯನನ್ನಾಗಿಸಿದರು ಗುರು ರಾಮಾನಂದರು. ವಿಠ್ಠಲನ ಪ್ರಖರ ಆಧ್ಯಾತ್ಮಿಕ ಸಾಧನೆ 'ಚೈತನ್ಯಾಶ್ರಮ' ಎಂಬ ನವ ನಾಮಧೇಯದೊಂದಿಗೆ ಪ್ರಾರಂಭವಾಯಿತು.

ಕಾಲಚಕ್ರ ಉರುಳಿತು. ಇತ್ತ ವಿಠ್ಠಲನ ಪತ್ನಿಯಾದರೋ ಪತಿಯ ಸಂನ್ಯಾಸ ಸ್ವೀಕಾರದ ಸುದ್ದಿಯಿಂದ ಬಹಳ ವಿಚಲಿತಳಾದಳು. ತುಂಬಾ ನೊಂದುಕೊಂಡ ಅವಳು ವೈರಾಗ್ಯಮಯ, ಸಂನ್ಯಾಸ ಸದೃಶ ಜೀವನವನ್ನು ನಡೆಸತೊಡಗಿದಳು. ಸದಾ ಸಿದ್ಧೇಶ್ವರನ ಸೇವೆ, ಅಶ್ವತ್ಥ ಪೂಜಾದಿಗಳಲ್ಲೇ ಕಾಲ ಕಳೆಯುತ್ತಿದ್ದಳು. ಒಂದು ದಿನ ಹೀಗೆ ಅಶ್ವತ್ಥ ಪ್ರದಕ್ಷಿಣೆ ಮುಗಿಸಿಬರುವಾಗ ದೇವಳದ ಮುಂದೆ ಯತಿಯೋರ್ವರು ಆಸೀನರಾಗಿ ಭಕ್ತರನ್ನು ಆಶೀರ್ವದಿಸುತ್ತಿದ್ದುದನ್ನು ಕಂಡು, ತಾನೂ ಗೌರವದಿಂದ ಪ್ರಣಾಮ ಮಾಡಿದಳು. ವಿಠ್ಠಲನಿಗೆ ಸಂನ್ಯಾಸ ನೀಡಿದ ರಾಮಾನಂದರೇ ಅವರು! ದಕ್ಷಿಣ ಭಾರತ ಯಾತ್ರೆ ಮಾಡುತ್ತ ಆಳಂದಿಗೆ ಬಂದಿದ್ದರು. ಸಾಧುಗಳು ತಮ್ಮ ವಾತ್ಸಲ್ಯಪೂರ್ಣ ಧ್ವನಿಯಲ್ಲಿ ಆಶೀರ್ವದಿಸಿದರು: 'ಸುಪುತ್ರವತೀ ಭವ!' ಮಿಂಚು ಬಡಿದಂತಾಯಿತು, ರುಕ್ಮಿಣಿಗೆ. ಅವಳ ಮುಖದಲ್ಲಿ ಕಂಡ ವಿಷಾದದ ನಗುವನ್ನು ಗಮನಿಸಿದ ಗುರುಗಳು ಕರುಣಾಪೂರ್ಣ ವಾಣಿಯಿಂದ ಅವಳ ಪೂರ್ವಾಪರಗಳನ್ನು ವಿಚಾರಿಸಿದರು. ಹತಭಾಗಿನಿಯಾದ ಅವಳ ವೃತ್ತಾಂತವನ್ನೆಲ್ಲಾ ಕೇಳಿದ ಅವರಿಗೆ, ತಮ್ಮ ಶಿಷ್ಯ ಚೈತನ್ಯಾಶ್ರಮನೇ ಆಕೆಯ ಪತಿ ವಿಠ್ಠಲನೆಂದು ಖಚಿತವಾಯಿತು. ''ಮಗಳೇ, ನಿನಗೆ ಅನ್ಯಾಯವಾಗಿದೆ. ನನ್ನ ಆಶೀರ್ವಾದ ಎಂದೂ ಹುಸಿಯಾಗದು. ಶೀಘ್ರವೇ ವಿಠ್ಠಲನು ನಿನ್ನೊಂದಿಗೆ ಮತ್ತೆ ಸಂಸಾರ ಮಾಡುವನು. ಇದು ಖಂಡಿತ ದೈವೇಚ್ಛೆ'' ಎಂದು ರುಕ್ಮಿಣಿಯನ್ನು ಸಂತೈಸಿ ಕಾಶಿಗೆ ಮರಳಿದರು.

ಗುರುಗಳು ರುಕ್ಮಿಣಿಯ ವಿಷಯ ಪ್ರಸ್ತಾಪಿಸುತ್ತಲೇ ತನ್ನ ತಪ್ಪನ್ನು ಒಪ್ಪಿಕೊಂಡ ವಿಠ್ಠಲನು, ''ಸಂನ್ಯಾಸ ಜೀವನದ ಆಕರ್ಷಣೆಯಿಂದ ತಾನು ಸಂಸಾರಿ ಎಂಬುದನ್ನು ಮರೆಮಾಚಿದೆ. ದಯವಿಟ್ಟು ನನ್ನ ತಪ್ಪನ್ನು ಮನ್ನಿಸಿ ದಾರಿ ತೋರಿ'' ಎಂದು ಪ್ರಾರ್ಥಿಸಿದನು. ದಯಾಮಯರಾದ ಗುರುಗಳು, ''ಇದು ದೈವೇಚ್ಛೆ, ನಿನ್ನ ಮನೆಯಲ್ಲಿ ಖಂಡಿತವಾಗಿ ದೈವಾಂಶ ಸಂಭೂತರ ಅವತಾರವಾಗಲಿದೆ. ಆದ್ದರಿಂದ ಆಳಂದಿಗೆ ಹಿಂದಿರುಗಿ ಮತ್ತೆ ಸಂಸಾರಿಯಾಗು'' ಎಂದು ಆದೇಶಿಸಿದರು. ಗುರುವಾಜ್ಞೆಯನ್ನು ಶಿರಸಾವಹಿಸಿ ವಿಠ್ಠಲನು ಆಳಂದಿಗೆ ಮರಳಿದನು. ವಿಠ್ಠಲಪಂತನ ಪುನರಾಗಮನದಿಂದ ರುಕ್ಮಿಣಿ ತುಂಬಾ ಸಂತಸಗೊಂಡಳು. ಅವನನ್ನು ತುಂಬು ಹೃದಯದಿಂದ ಸ್ವಾಗತಿಸಿದಳು. ಜೀವನದಲ್ಲಿ ಮತ್ತೆ ನೆಮ್ಮದಿಯ ಬೆಳಕು ಮೂಡಿತು. ದೈವೇಚ್ಛೆಯಿಂದಲೇ ಎಲ್ಲ ನಡೆಯುತ್ತಿದೆಯೆಂಬುದ

ರಲ್ಲಿ ಅವಳಿಗೆ ಪೂರ್ಣ ವಿಶ್ವಾಸವುಂಟಾಯಿತು. ಹೀಗೆ ಹೊಸ ಜೀವನ ಪ್ರಾರಂಭವಾಯಿತು.

ಆಗಿನ ಕಾಲದಲ್ಲಿ ಸಾಮಾಜಿಕ ಕಟ್ಟುಪಾಡುಗಳು ಬಹಳ ಕಠಿಣ ವಾಗಿದ್ದವು. ಬ್ರಾಹ್ಮಣರು ಆಚಾರ ವಿಚಾರಗಳಲ್ಲಿ ಶಾಸ್ತ್ರಗಳನ್ನು ಮೀರುವಂತಿರಲಿಲ್ಲ. ಸಮಾಜದಲ್ಲಿ ಉಚ್ಚ-ನೀಚ ಭೇದಭಾವ, ಮಡಿಮೈಲಿಗೆಗಳು ನಿಯಮಾನುಸಾರವೇ ಪಾಲಿಸಲ್ಪಡುತ್ತಿದ್ದವು. ಶಾಸ್ತ್ರವಿರೋಧಿ ಕಾರ್ಯ ಮಾಡಿದವರಿಗೆ ಸಾಮಾಜಿಕ ಬಹಿಷ್ಕಾರ ದಂತಹ ಶಿಕ್ಷೆ ಸಾಮಾನ್ಯವಾಗಿತ್ತು.

ಊರಿಗೆ ಹಿಂದಿರುಗಿದ ವಿಠ್ಠಲಪಂತನ ಬದುಕು ಸುಗಮವಾಗ ಲಿಲ್ಲ. ಗೃಹಸ್ಥಾಶ್ರಮಿ ಸಂನ್ಯಾಸಿಯಾಗಬಹುದಾದರೂ ಒಮ್ಮೆ ಸಂನ್ಯಾಸಿ ಯಾದವನು ಮತ್ತೆ ಗೃಹಸ್ಥನಾಗುವುದು ಶಾಸ್ತ್ರಸಮ್ಮತವಲ್ಲ. ಹೀಗಾಗಿ ಊರ ಬ್ರಾಹ್ಮಣರು ಅವನನ್ನು ಆಶ್ರಮ ಭ್ರಷ್ಟನೆಂದು ತಿರಸ್ಕರಿಸಿ ದರು. ಇಡೀ ಊರೇ ಅವರನ್ನು ಬಹಿಷ್ಕರಿಸಿತು. ಹಿಂದೊಮ್ಮೆ ಊರ ವರ ಗೌರವಾದರಗಳಿಗೆ ಪಾತ್ರವಾಗಿದ್ದ ಕುಟುಂಬ ಈಗ ಎಲ್ಲರ ನಿಂದನೆಯನ್ನು ಎದುರಿಸಬೇಕಾಯಿತು. ತಮ್ಮವರೆಂದೆನಿಸಿಕೊಂಡ ವರೇ ದೂರಮಾಡಿದರು. ಯಾರೂ ಭಿಕ್ಷೆಯನ್ನೇ ನೀಡುತ್ತಿರಲಿಲ್ಲ. ಯಾರಾದರೂ ಕರುಣೆಯಿಂದ ಸಹಾಯಮಾಡಲು ಬಂದರೆ ಅವರೂ ಊರವರ ವಿರೋಧ ಎದುರಿಸಬೇಕಿತ್ತು. ಊರಲ್ಲಿ ಬದುಕು ದುಸ್ಸಹವಾಯಿತು. ಕೊನೆಗೆ ಊರ ಹೊರಗಿನ ಕಾಡಿನ ಬದಿಯಲ್ಲಿ ಕುಟೀರವೊಂದನ್ನು ಕಟ್ಟಿಕೊಂಡರು. ಅಲ್ಲೇ ಕಾಡಿನ ಕಂದ ಮೂಲ ಗಳಿಂದ, ತಾವೇ ಬೆಳೆದ ಸೊಪ್ಪುಸದೆಗಳಿಂದ ಹಸಿವನ್ನು ನೀಗಿಕೊಳ್ಳು ತ್ತಿದ್ದರು. ಅಷ್ಟು ಕಷ್ಟಗಳಿಗೀಡಾದರೂ ಆ ದಂಪತಿಗಳು ಯಾರ ಮೇಲೂ ಕೋಪಗೊಳ್ಳುತ್ತಿರಲಿಲ್ಲ. ಅವರ ಕ್ಷಮಾಗುಣ ಕಿಂಚಿತ್ತೂ ಬದಲಾಗಲಿಲ್ಲ. ಎಲ್ಲವನ್ನೂ ದೇವರ ಇಚ್ಛೆ ಎಂದು ಸಹಿಸುತ್ತಿದ್ದರು. ಅವರ ದೈವಭಕ್ತಿ ತಿಲಮಾತ್ರವೂ ಕುಂದಲಿಲ್ಲ.

ದಿನಗಳು ಉರುಳಿದವು. ರುಕ್ಮಿಣಿಗೆ ಯತಿಗಳು ನೀಡಿದ ಆಶೀ ರ್ವಾದ ಫಲಿಸುವ ಸೂಚನೆಗಳು ಕಾಣತೊಡಗಿದವು. ಕ್ರಿ.ಶ.೧೨೭೩ (ಶಕ ೧೧೯೫) ರಲ್ಲಿ ಅವಳ ಪವಿತ್ರ ಗರ್ಭದಿಂದ ಚೊಚ್ಚಲ ಮಗು ವಿನ ಜನನವಾಯಿತು. ಶುಭಲಕ್ಷಣಗಳಿಂದ ಕೂಡಿದ ಮಗುವಿಗೆ ನಿವೃತ್ತಿನಾಥನೆಂದು ನಾಮಕರಣ ಮಾಡಿದರು. ಮುಂದೆ ಕ್ರಿ.ಶ ೧೨೭೫ ರಲ್ಲಿ ಕೃಷ್ಣಾಷ್ಟಮಿಯಂದು ಜ್ಞಾನದೇವ, ನಂತರ ೧೨೭೭ ರಲ್ಲಿ ಸೋಪಾನದೇವ ಹಾಗೂ ಕೊನೆಗೆ ೧೨೭೯ರಲ್ಲಿ ಮುಕ್ತಾಬಾಯಿ ಎಂಬ ಕುವರಿಯ ಜನನವಾಯಿತು. (ನಿವೃತ್ತಿ ನಾಥನು ಶಿವನ ಅಂಶ ವೆಂದೂ, ಜ್ಞಾನದೇವನು ಸ್ವಯಂ ನಾರಾಯಣನ ಅಂಶವೆಂದೂ, ಸೋಪಾನನು ಬ್ರಹ್ಮದೇವನ ಅಂಶವೆಂದೂ, ಮುಕ್ತಾಬಾಯಿಯು ಮಹಾಮಾಯೆಯ ಅಂಶವೆಂದೂ ನಂಬುತ್ತಾರೆ). ವಿಠಲ, ರುಕ್ಮಿಣಿ ಯರಿಗೆ ತಮ್ಮ ಮಕ್ಕಳು ದೈವಾಂಶಸಂಭೂತರೆಂಬ ವಿಷಯದಲ್ಲಿ ಯಾವುದೇ ಸಂಶಯವಿರಲಿಲ್ಲ. ಆ ದಿವ್ಯ ಶಿಶುಗಳನ್ನು ನೋಡಿದರೆ ಯಾರಿಗೂ ಹಾಗೆಯೇ ಅನ್ನಿಸುತ್ತಿತ್ತು. ಬಹಳ ಕಷ್ಟಗಳ ನಡುವೆ ಕೂಡ ಮಕ್ಕಳನ್ನು ಪ್ರೇಮದಿಂದ ಬೆಳೆಸಿದರು. ಆದರೆ ಊರವರ ದೃಷ್ಟಿಯಲ್ಲಿ ಈ ಅಮಾಯಕ ಮಕ್ಕಳೂ ಅಪವಿತ್ರರು. ಅವರನ್ನು ಅಸ್ಪೃಶ್ಯರಂತೆಯೇ ನೋಡುತ್ತಿದ್ದರು. ಸಂನ್ಯಾಸಿಯ ಮಕ್ಕಳೆಂದು ಹೀಯಾಳಿಸುತ್ತಿದ್ದರು. ಊರಿನ ಗುರುಕುಲಗಳಿಗೆ ಪ್ರವೇಶ ಕೊಡು ತ್ತಿರಲಿಲ್ಲ. ಆದ್ದರಿಂದ ವಿಠ್ಠಲ ಪಂತನೇ ಅವರ ವಿದ್ಯಾಭ್ಯಾಸದ ಹೊಣೆ ಯನ್ನು ಹೊತ್ತನು. ಜನ್ಮತಃ ಜ್ಞಾನಿಗಳೇ ಆಗಿದ್ದ ನಾಲ್ಕೂ ಮಕ್ಕಳು ತಂದೆಯ ಶಿಕ್ಷಣದಿಂದ ಬಲುಬೇಗನೆ ಎಲ್ಲ ಶಾಸ್ತ್ರಜ್ಞಾನವನ್ನೂ ಅರಗಿಸಿ ಕೊಂಡರು. ತಾಯಿತಂದೆಯರಂತೆ ಅವರೂ ಸದ್ಗುಣವಂತರೂ, ಸಹನಶೀಲರೂ ದೈವಭಕ್ತರೂ, ಕ್ಷಮಾಶೀಲರೂ ಆಗಿ ಬೆಳೆದರು.

ನಿವೃತ್ತಿನಾಥನಿಗೆ ಉಪನಯನದ ವಯಸ್ಸಾಯಿತು. ಆದರೆ ಬ್ರಾಹ್ಮಣ ಸಭೆ ಅವನಿಗೆ ಬ್ರಾಹ್ಮಣತ್ವ ನೀಡಲು ನಿರಾಕರಿಸಿತು. ಸಂನ್ಯಾಸಿಯ ಮಕ್ಕಳಿಗೆ ಉಪನಯನ ಸಂಸ್ಕಾರ ಮಾಡಲು ಅವರ ಬಳಿ ಯಾವುದೇ ಶಾಸ್ತ್ರಾಧಾರ ಇರಲಿಲ್ಲ. ತನ್ನ ತಪ್ಪಿನಿಂದ ಮಕ್ಕಳ ಭವಿಷ್ಯ ಹಾಳಾಯಿತೆಂದು ವಿಠಲನು ನೊಂದುಕೊಂಡನು. ತ್ರ್ಯಂಬ ಕೇಶ್ವರನ ಸನ್ನಿಧಿಯಲ್ಲಿಯಾದರೂ ಸ್ವಲ್ಪ ನೆಮ್ಮದಿ ಸಿಗಬಹುದೆಂದು ಕೆಲ ದಿನಗಳಿಗಾಗಿ ಕುಟುಂಬ ನಾಸಿಕದ ಕಡೆ ಯಾತ್ರೆ ಹೊರಟಿತು. ಕಾಡಿನ ಮಾರ್ಗದಲ್ಲಿ ಹೋಗುವಾಗ ಹುಲಿಯೊಂದು ಅಟ್ಟಿಸಿ ಕೊಂಡು ಬಂತು. ತಪ್ಪಿಸಿಕೊಂಡು ಓಡುವಾಗ ನಿವೃತ್ತಿನಾಥನು ದಾರಿ ತಪ್ಪಿದನು. ಅವನಿಗೆ ಕಾಡಿನ ಗವಿಯೊಂದರಲ್ಲಿ ಜ್ಞಾನಿನಾಥರೆಂಬ ನಾಥ ಪಂಥದ ಮಹಾಪುರುಷರ ದರ್ಶನವೂ, ಅವರಿಂದ ದೀಕ್ಷೆ ಯೂ ಸಿಕ್ಕಿತು. ಆದರೆ ಅವನನ್ನು ಕಾಣದೆ ಇಡೀ ಕುಟುಂಬ ಹುಡು ಕಾಟದಲ್ಲಿ ಬಳಲಿ ಹೋಗಿತ್ತು. ಕೆಲ ದಿನಗಳಲ್ಲಿ ಅವನೇ ಹಿಂದಿರುಗಿ ಬಂದು ಉಳಿದವರನ್ನು ಸೇರಿದನು. ಗುರುಕೃಪೆಯಿಂದ ಅವನಲ್ಲಿ ಅದ್ಭುತ ಆಧ್ಯಾತ್ಮಿಕ ತೇಜವು ಪ್ರಕಟವಾಗಿತ್ತು. ಅವನು ತನಗಾದ ಗುರುಕೃಪೆಯ ವಿಚಾರವನ್ನು ಹಂಚಿಕೊಂಡಾಗ ಎಲ್ಲರೂ ಸಂತೋಷ ಪಟ್ಟರು. ತಂದೆಯ ಅನುಜ್ಞೆ ಪಡೆದು ಜ್ಞಾನದೇವನು ನಿವೃತ್ತಿನಾಥ ನನ್ನು ಗುರುವಾಗಿ ಸ್ವೀಕರಿಸಿ ದೀಕ್ಷೆಯನ್ನು ಪಡೆದನು. ಜ್ಞಾನದೇವ ನಿಂದ ಸೋಪಾನದೇವನೂ ಮುಕ್ತಾಬಾಯಿಯೂ ದೀಕ್ಷೆ ಪಡೆದರು. ಮಕ್ಕಳೆಲ್ಲರೂ ಆತ್ಮಜ್ಞಾನ ಸಂಪಾದಿಸಿ ವಿಠಲಪಂತನ ಹರ್ಷಕ್ಕೆ ಕಾರಣ ರಾದರು. ನಂತರ ಕೆಲವು ದಿನಗಳನ್ನು ತ್ರ್ಯಂಬಕೇಶ್ವರನ ಸನ್ನಿಧಿಯಲ್ಲಿ ಕಳೆದು ಎಲ್ಲರೂ ಆಳಂದಿಗೆ ಮರಳಿದರು.

ತಮ್ಮದಲ್ಲದ ತಪ್ಪಿಗೆ ಮಕ್ಕಳಿಗೆ ಅನ್ಯಾಯವಾಗಬಾರದೆಂದು ವಿಠ್ಠಲಪಂತನೂ ರುಕ್ಮಿಣಿದೇವಿಯೂ ಮತ್ತೊಮ್ಮೆ ಬ್ರಾಹ್ಮಣ ಸಭೆ ಯಲ್ಲಿ ಅರಿಕೆ ಮಾಡಿಕೊಂಡರು. ಅವರು ವಿಧಿಸುವ ಯಾವುದೇ ಪ್ರಾಯಶ್ಚಿತ್ತಕ್ಕೂ ತಾವು ಸಿದ್ಧರೆಂದೂ, ಮಕ್ಕಳಿಗೆ ಶುದ್ಧಿಪತ್ರ ಕೊಟ್ಟು, ಉಪನಯನಾದಿಗಳಿಗೆ ಅವಕಾಶ ಹಾಗೂ ಸಮಾನ ಸ್ಥಾನಮಾನ ನೀಡಬೇಕೆಂದೂ ವಿನಯದಿಂದ ನಿವೇದಿಸಿದರು. ತಪ್ಪಿತಸ್ಥರಿಂದ ದೇಹತ್ಯಾಗವೇ ಪ್ರಾಯಶ್ಚಿತ್ತವೆಂದು ಬ್ರಾಹ್ಮಣ ಸಭೆ ತೀರ್ಪನ್ನಿತ್ತಿತು. ಆ ಆದೇಶದಂತೆ ವಿಠಲಪಂತನೂ, ಅವನ ಧರ್ಮಪತ್ನಿಯೂ ಗಂಗೆ ಯಲ್ಲಿ ದೇಹ ತ್ಯಾಗ ಮಾಡಿದರು.

ಮುಂದೆ ನಿವೃತ್ತಿನಾಥನೂ, ತಮ್ಮಂದಿರೂ ತಮ್ಮ ತಂದೆ ತಾಯಿ ಯರ ಇಚ್ಛೆಯಂತೆ ಶುದ್ಧಿಪತ್ರಕ್ಕಾಗಿ ಬ್ರಾಹ್ಮಣರನ್ನು ಸಂಪರ್ಕಿಸಿ ದರು. ಆದರೆ ಆಳಂದಿಯ ಬ್ರಾಹ್ಮಣರಿಗೆ ಶುದ್ಧಿಪತ್ರದ ವಿಚಾರದಲ್ಲಿ ಯಾವುದೇ ನಿರ್ಣಯಕ್ಕೆ ಬರಲಾಗಲಿಲ್ಲ. ಅವರನ್ನು ಪೈಠಣದ ಧರ್ಮಪೀಠಕ್ಕೆ ಕಳಿಸಿದರು. ಅಲ್ಲಿ ದೊಡ್ಡದೊಡ್ಡ ಪಂಡಿತರೆಲ್ಲ ಸಭೆ ಸೇರಿದರು. ಚಿಕ್ಕ ವಯಸ್ಸಿನವರಾದರೂ ಜ್ಞಾನದಲ್ಲಿ ಪ್ರೌಢರನ್ನೂ

ಮೀರಿಸುವಂತಿದ್ದ ಮಕ್ಕಳ ಯೋಗ್ಯತೆಯನ್ನು ಪಂಡಿತರು ಗುರುತಿಸಿದರು. ಆದರೂ ಶಾಸ್ತ್ರಗ್ರಂಥಗಳಲ್ಲಿ ಸಂನ್ಯಾಸಿಯ ಸಂತಾನದ ವಿಚಾರ ಪ್ರಸ್ತಾಪವಿಲ್ಲದಿರುವುದರಿಂದ ಶುದ್ಧಿಪತ್ರ ಕೊಡಲು ನಿರಾಕರಿಸಿದರು. ಬದಲಿಗೆ ಆಜೀವ ಬ್ರಹ್ಮಚಾರಿಗಳಾಗಿ, ಅವಿವಾಹಿತರಾಗಿ, ಪೂಜೆ, ಧ್ಯಾನಗಳಲ್ಲಿ ತೊಡಗಿಸಿಕೊಂಡು ಸಮಾಜದ ಕಟ್ಟುಪಾಡುಗಳಂತೆ ಬಾಳಲು ಸಲಹೆ ನೀಡಿದರು. ಈಗಾಗಲೇ ಗುರುಗಳಿಂದ ದೀಕ್ಷೆ ಪಡೆದ ನಿವೃತ್ತಿನಾಥ ಮೊದಲಾದವರಿಗೆ ಈ ಸಲಹೆಗಳೇನೂ ಹೊಸದಾಗಿ ಆಚರಣೆಗೆ ತರಬೇಕಾದ್ದಿರಲಿಲ್ಲ. ಆದರೆ ವಿಭಿನ್ನ ವರ್ಗಗಳ ನಡುವೆ ತಾರತಮ್ಯ, ಭೇದಭಾವ ಅವರಿಗೆ ಒಪ್ಪಿಗೆಯಾಗಲಿಲ್ಲ. ಸರ್ವ ಜೀವಿಗಳಲ್ಲಿಯೂ ಇರುವುದು ಒಂದೇ ಚೈತನ್ಯ. ಹಾಗಾಗಿ ಭೇದಭಾವ ಕೂಡದೆಂದು ಜ್ಞಾನದೇವನು ವಾದಿಸಿದನು. ಈ ಚಿಕ್ಕ ಬಾಲಕನು ಶಾಸ್ತ್ರ ವಿಚಾರದಲ್ಲಿ ತಮ್ಮೊಂದಿಗೆ ವಾದಿಸುತ್ತಿರುವುದು ಕೆಲವು ಪಂಡಿತರ ಅಹಂಕಾರಕ್ಕೆ ಘಾಸಿಯಾಗಿ ಅವರ ಕೋಪಕ್ಕೆ ಕಾರಣವಾಯಿತು. ವಾದ ವಿವಾದ ತಾರಕಕ್ಕೇರಿತು. ಆ ಸಮಯದಲ್ಲಿ ಹೊರಗೆ ಒಬ್ಬಾತ ಕೋಣವೊಂದನ್ನು ಮನೆಗೆ ಒಯ್ಯುತ್ತಿದ್ದನು. ಎಲ್ಲ ಜೀವಿಗಳಲ್ಲೂ ಆತ್ಮ ಸ್ವರೂಪಿ ಚೈತನ್ಯ ಒಂದೇ ಎಂದಾದರೆ ಆ ಕೋಣನಿಗೂ ಬ್ರಾಹ್ಮಣರಿಗೂ ಏನೂ ವ್ಯತ್ಯಾಸವಿಲ್ಲವಲ್ಲ ! ಆ ಕೋಣ ವೇದ ಪಠಿಸಬಲ್ಲುದೆ ಎಂದರು. ಜ್ಞಾನದೇವನು ಶಾಂತನಾಗಿ, ಪರಮಾತ್ಮನ ಇಚ್ಛೆಯಿದ್ದರೆ ಯಾಕಾಗಬಾರದು? ಎಂದನು. ಮೆಲ್ಲನೇ ಕೋಣದ ಬಳಿ ಸಾರಿ, ಅದರಲ್ಲಿಯ ಆತ್ಮರೂಪಿ ಭಗವಂತನಿಗೆ ನಮಸ್ಕರಿಸಿ ಓಂಕಾರನಾದ ಮಾಡುತ್ತಲೇ ಕೋಣವೂ ಓಂಕಾರವನ್ನು ಸ್ಫುಟವಾಗಿ ಉಚ್ಚರಿಸಿತು. ನಂತರ ವೇದಗಳ ಋಚೆಗಳನ್ನೂ ಸ್ವರಸಹಿತ ಉಚ್ಚರಿಸಲಾರಂಭಿಸಿತು. ಸೇರಿದ ವೈದಿಕ ಜನರೆಲ್ಲ ವಿಸ್ಮಿತರಾದರು. ಪಂಡಿತ ಪ್ರಮುಖರಿಗೆ ಈ ಬಾಲಕರು ಸಾಮಾನ್ಯರಲ್ಲವೆಂಬುದು ಮನವರಿಕೆಯಾಯಿತು. ''ನೀವು ಸಾಕ್ಷಾತ್ ತ್ರಿಮೂರ್ತಿಗಳೇ ಆಗಿದ್ದೀರಿ. ನಿಮಗೆ ಶುದ್ಧಿಪತ್ರ ಕೊಡುವ ಯೋಗ್ಯತೆ ಯಾರಿಗಿದೆ? ದಯವಿಟ್ಟು ನಮ್ಮನ್ನು ಕ್ಷಮಿಸಿ'' ಎಂದು ಬೇಡಿಕೊಂಡರು. ಅಂದಿನಿಂದಲೇ ಅವರೆಲ್ಲಾ ಜ್ಞಾನದೇವನ ಶಿಷ್ಯರಾದರು. ಅವನು ಬೋಧಿಸಿದ, ಜಾತಿಮತ ಭೇದವಿಲ್ಲದೆ ಎಲ್ಲರೂ ಅನುಸರಿಸಬಹುದಾದ ಭಕ್ತಿಮಾರ್ಗವು ಜನಪ್ರಿಯವಾಗತೊಡಗಿತು.

ಪೈಠಣದಲ್ಲಿಯ ಘಟನೆಗಳಿಂದ ಜ್ಞಾನೇಶ್ವರನ ಕೀರ್ತಿ ಎಲ್ಲೆಡೆ ಪಸರಿಸಿತು. ಆಳಂದಿಯಲ್ಲೂ ಜನರು ಅವರನ್ನು ಗೌರವಿಸಲಾರಂಭಿಸಿದರು. ಆದರೂ ಕೆಲವು ಕರ್ಮಠ ಬ್ರಾಹ್ಮಣರು ಅವರನ್ನು ಸಮಾನವಾಗಿ ಕಾಣದೆ, ತಿರಸ್ಕಾರದಿಂದಲೇ ವ್ಯವಹರಿಸುತ್ತಿದ್ದರು. ವಿಸೋಭ ಚಾಟಿ ಅನ್ನುವ ಒಬ್ಬ ಧನಿಕ ಬ್ರಾಹ್ಮಣ ಅಂತಹವರಲ್ಲಿ ಒಬ್ಬ. ಅವರಿಗೆ ಭಿಕ್ಷೆ ಕೊಡುವುದಿರಲಿ, ಮನೆಯ ಬಳಿ ಸುಳಿಯುವುದನ್ನೂ ಅವನು ಸಹಿಸುತ್ತಿರಲಿಲ್ಲ. ಒಂದು ದಿನ ಮುಕ್ತಾಬಾಯಿಯು ನಿವೃತ್ತಿನಾಥನಿಗಾಗಿ ಮಂಡಿಗೆ ಮಾಡಲು ಕುಂಬಾರನಿಂದ ಮಣ್ಣಿನ ಪಾತ್ರೆ ತರಲು ಹೋದರೆ, ವಿಸೋಭನು ಪಾತ್ರೆ ಕೊಡದಂತೆ ತಡೆದನು. ಮುಕ್ತಾಬಾಯಿಯು ತುಂಬಾ ನೊಂದುಕೊಂಡಳು. ಅವಳನ್ನು ಸಂತೈಸಿದ ಜ್ಞಾನದೇವನು ತನ್ನ ಬೆನ್ನಲ್ಲೇ ಯೋಗಬಲದಿಂದ ಅಗ್ನಿಯನ್ನು ಸ್ಥಾಪಿಸಿ, ಬೆನ್ನಮೇಲೇ ಮಂಡಿಗೆ ತಯಾರಿಸಲು ಹೇಳಿದನು. ಯೋಗಾಗ್ನಿಯಿಂದ ಕಾದ ಕಾವಲಿಯಂತಾದ ಅವನ ಬೆನ್ನ ಮೇಲೆ ಮುಕ್ತಾಬಾಯಿಯು ಮಂಡಿಗೆ ತಯಾರಿಸಿದಳು. ಎಲ್ಲರೂ ಸವಿದು ಸಂತುಷ್ಟರಾದರು. ಮರೆಯಿಂದ ಇದೆಲ್ಲವನ್ನೂ ವೀಕ್ಷಿಸುತ್ತಿದ್ದ ವಿಸೋಭನಿಗೆ ಆಶ್ಚರ್ಯವೂ, ತನ್ನ ತಪ್ಪಿನ ಅರಿವೂ ಆಗಿ, ಪಶ್ಚಾತ್ತಾಪದಿಂದ ಕ್ಷಮೆ ಯಾಚಿಸಿದನು. ನಂತರ ಜ್ಞಾನದೇವನಿಂದ ದೀಕ್ಷೆಯನ್ನೂ ಪಡೆದ ಅವನ ಜೀವನದಲ್ಲಿ ಮಹತ್ತರ ಬದಲಾವಣೆಯಾಯಿತು. ಮುಂದೆ ಪ್ರಸಿದ್ಧ ಸಂತ ನಾಮದೇವನಿಗೆ ಇವನೇ ಗುರುವಾದನು.

ಚಾಂಗದೇವ ಒಬ್ಬ ಪ್ರಸಿದ್ಧ ಯೋಗಿ. ಹಲವಾರು ಸಿದ್ಧಿಗಳನ್ನು ಪಡೆದಿದ್ದನು. ಆಗಿನ ಅವನ ಪ್ರಾಯ ೧೪೦೦ ವರ್ಷಗಳಂತೆ ! ತನ್ನ ಸಿದ್ಧಿಗಳ ಆತ ಬಲದಿಂದ ಪಶುಪಕ್ಷಿಗಳನ್ನೂ ನಿಯಂತ್ರಿಸಬಲ್ಲವನಾಗಿದ್ದನು. ಜ್ಞಾನದೇವನ ಕೀರ್ತಿ ಅವನ ಕಿವಿಗೂ ತಲುಪಿತು. ಜ್ಞಾನದೇವನ ಪವಾಡಗಳನ್ನು ಕೇಳಿ, ಅವನನ್ನು ನೋಡಲು ಬಯಸಿದನು. ತನ್ನ ಶಕ್ತಿಗಳನ್ನು ಪ್ರದರ್ಶಿಸಲು ತಾನೊಂದು ಹೆಬ್ಬುಲಿಯನ್ನೇರಿ, ಕೈಯಲ್ಲಿ ಘೋರ ಸರ್ಪಗಳನ್ನೇ ಚಾವಟಿಯನ್ನಾಗಿ ಮಾಡಿ, ತನ್ನ ಸಾವಿರಾರು ಅನುಚರರೊಡನೆ ಆಳಂದಿಗೆ ಹೊರಟನು. ಒಂದು ಮೋಟು ಗೋಡೆಯ ಮೇಲೆ ಕುಳಿತ ಜ್ಞಾನದೇವ, ನಿವೃತ್ತಿ, ಸೋಪಾನ ಹಾಗೂ ಮುಕ್ತಾಬಾಯಿ ಚಾಂಗದೇವನ ಬರವನ್ನೇ ನಿರೀಕ್ಷಿಸುತ್ತಿದ್ದರು. ಬರುತ್ತಿರುವವನು ನಮ್ಮ ಅತಿಥಿ. ಹಾಗಾಗಿ ನಾವು ತುಸು ದೂರದಲ್ಲೇ ಅವರನ್ನು ಸ್ವಾಗತಿಸಬೇಕಾದ್ದು ನಮ್ಮ ಧರ್ಮ. ಹೀಗೆಂದು ಜ್ಞಾನದೇವನು ಕುಳಿತ ಗೋಡೆಗೆ ತಮ್ಮನ್ನು ಚಾಂಗದೇವನೆಡೆಗೆ ತಲಪಿಸುವಂತೆ ಕೋರಿದನು. ಕೂಡಲೇ ಗೋಡೆಯು ಚಲಿಸಲಾರಂಭಿಸಿತು. ಹಾಗೆಯೇ ಗಾಳಿಯಲ್ಲಿ ತೇಲಿ ಚಾಂಗದೇವನ ಮುಂದೆ ಇಳಿಯಿತು. ಈ ಪವಾಡವನ್ನು ನೋಡಿ ಚಾಂಗದೇವನು ಬೆರಗಾದನು. ಇವರೆಲ್ಲರೂ ಮಹಾಜ್ಞಾನಿಗಳು, ಮಹಾಪುರುಷರು ಎಂದು ಅವನಿಗೆ ಅರಿವಾಯಿತು. ಹುಲಿಯಿಂದ ಇಳಿದು ಜ್ಞಾನದೇವನಿಗೆ ಸಾಷ್ಟಾಂಗವೆರಗಿದನು. ಜ್ಞಾನದೇವನೂ ಅವನನ್ನು ಪ್ರೇಮದಿಂದ ಆಲಂಗಿಸಿ, ಯೋಗಕ್ಕಿಂತ ಜ್ಞಾನ ಶ್ರೇಷ್ಠ, ಆದ್ದರಿಂದ ಮುಕ್ತಾಬಾಯಿಯಿಂದ ದೀಕ್ಷೆ ಪಡೆದು ಜ್ಞಾನಿಯಾಗುವಂತೆ ಹರಸಿದನು. ಅಂತೆಯೇ ಚಾಂಗದೇವನು ಮುಕ್ತಾಬಾಯಿಯ ಶಿಷ್ಯನಾದನು. ಜ್ಞಾನದೇವನು ಚಾಂಗದೇವನಿಗೆ ನೀಡಿದ ಉಪದೇಶಗಳು 'ಚಾಂಗದೇವ ಪಾಸಷ್ಠಿ' ಎಂದು ಪ್ರಸಿದ್ಧವಾಗಿವೆ. ಈ ೬೫ ಶ್ಲೋಕಗಳಲ್ಲಿ ಚಿದ್ವಿಲಾಸವಾದ ಎಂಬ ನಾಥಪಂಥದ ಆಧ್ಯಾತ್ಮಿಕ ತತ್ತ್ವಶಾಸ್ತ್ರವನ್ನು ವಿವರಿಸಲಾಗಿದೆ.

ಪೈಠಣದಿಂದ ಬಂದ ನಿವೃತ್ತಿನಾಥ, ಜ್ಞಾನದೇವ , ಸೋಪಾನ ಹಾಗೂ ಮುಕ್ತಾಬಾಯಿ ಕೆಲವು ಕಾಲ ಆಪೇಗಾಂವ್‌ನಲ್ಲೂ, ಆಳಂದಿಯಲ್ಲೂ ಕಳೆದರು. ಹೀಗೆ ಸುತ್ತಾಡುತ್ತಿರುವಾಗ ಒಂದು ಊರಿನಲ್ಲಿ ಒಬ್ಬ ಬ್ರಾಹ್ಮಣ ದುಃಖಿಸುತ್ತಿರುವುದನ್ನು ಕಂಡರು. ಅವನ ಮನೆಯಲ್ಲಿ ಶ್ರಾದ್ಧಕಾರ್ಯಕ್ಕೆ ಬ್ರಾಹ್ಮಣರು ಬರಲು ನಿರಾಕರಿಸಿರುವುದರಿಂದ ಅವನು ದುಃಖಿತನಾಗಿದ್ದ. ಜ್ಞಾನದೇವನು ಅವನನ್ನು ಸಮಾಧಾನಪಡಿಸಿ ಶ್ರಾದ್ಧಕ್ಕೆ ತಯಾರಿ ಮಾಡಲು ಹೇಳಿದನು. ನಂತರ ಪಿತೃದೇವತೆಗಳನ್ನು ಪ್ರಾರ್ಥಿಸಿ, ಸ್ವಯಂ ಪಿತೃಗಳೇ ಪಿತೃಲೋಕದಿಂದ ಬಂದು ಪಿಂಡದಾನದಲ್ಲಿ ಪಾಲ್ಗೊಳ್ಳುವಂತೆ ಮಾಡಿದನು. ಜ್ಞಾನದೇವನ ಹಲವಾರು ಪವಾಡಗಳಲ್ಲಿ ಇದೂ ಒಂದು.

ಅಲ್ಲಿಂದ ಈ ಸೋದರರು ತಂಗಿಯೊಂದಿಗೆ ನೇವಾಸ ಎಂಬಲ್ಲಿಗೆ ಹೊರಟರು. ಅಲ್ಲಿ ಪ್ರಸಿದ್ಧ ಮೋಹಿನಿರಾಜ (ಮಹಾಲಸಾ) ದೇವ ಸ್ಥಾನವಿದೆ. ಭಸ್ಮಾಸುರನ ನಾಶಕ್ಕಾಗಿ ಮೋಹಿನಿಯ ಅವತಾರ ತಾಳಿದ ವಿಷ್ಣುವಿನ ದೇವಾಲಯವಿದು. ಹೋಗುತ್ತಿರುವಾಗ ದಾರಿಯಲ್ಲಿ ಒಬ್ಬ ಮಹಿಳೆಯು ತನ್ನ ಗಂಡನ ಶವದೆದುರು ಪ್ರಲಾಪಿಸುತ್ತಿರುವ ಹೃದಯವಿದ್ರಾವಕ ದೃಶ್ಯ ಎದುರಾಯಿತು. ಮಹಿಳೆಯ ಆಕ್ರಂದನದಿಂದ ಜ್ಞಾನದೇವನ ಮನಸ್ಸು ಕರಗಿತು. ''ತಾಯಿ, ಈತನ ಹೆಸರೇನು?'' ಎಂದು ವಿಚಾರಿಸಲು 'ಸಚ್ಚಿದಾನಂದ' ಎಂಬ ಉತ್ತರ ಬಂತು. ಸಚ್ಚಿದಾನಂದನಿಗೆ ಅಂತ್ಯವೆ? ಹೀಗೆಂದು 'ಸಚ್ಚಿದಾನಂದ ಏಳು' ಎಂದು ಜ್ಞಾನದೇವನು ಕರೆಯುತ್ತಲೇ ಮೃತ ವ್ಯಕ್ತಿಯು ನಿದ್ದೆಯಿಂದೆದ್ದಂತೆ ಎದ್ದು ಕುಳಿತನು. ಜನರೆಲ್ಲ ಆಶ್ಚರ್ಯ ಚಕಿತರಾಗಿ ಹರ್ಷೋದ್ಗಾರವೆಸಗಿದರು. ''ಜ್ಞಾನದೇವ ಮಹಾರಾಜರಿಗೆ ಜಯವಾಗಲಿ'' ಎಂದು ಘೋಷಣೆ ಕೂಗಿದರು. ಈ ಸಚ್ಚಿದಾನಂದನೂ ಕೂಡ ಪತ್ನಿಯ ಒಪ್ಪಿಗೆಯೊಡನೆ ಜ್ಞಾನದೇವನ ಶಿಷ್ಯನಾಗಿ ಸಂನ್ಯಾಸ ಸ್ವೀಕರಿಸಿದನು. ಮುಂದೆ ಜ್ಞಾನದೇವನ ಪ್ರಸಿದ್ಧ ಗ್ರಂಥ – ಜ್ಞಾನೇಶ್ವರಿಯನ್ನು ಲಿಪಿಬದ್ಧಗೊಳಿಸಿದ ಕೀರ್ತಿ ಇವನದು.

ಆ ಕಾಲದಲ್ಲಿ ಸಮಾಜ ಜಾತಿ ಮತ ಭೇದಗಳಿಂದ ಬಳಲುತ್ತಿತ್ತು. ಶಾಸ್ತ್ರಜ್ಞಾನ ಕೆಲವೇ ಮೇಲ್ಜಾತಿಯವರಿಗೆ ಮಾತ್ರ ಸೀಮಿತವಾಗಿತ್ತು. ಹೆಚ್ಚಿನ ಶಾಸ್ತ್ರ ಗ್ರಂಥಗಳು ಸಂಸ್ಕೃತದಲ್ಲಿದ್ದವು. ಜನಸಾಮಾನ್ಯರ ಆಧ್ಯಾತ್ಮಿಕ ಹಸಿವನ್ನು ನೀಗಿಸಲು ಸಾಧನಗಳಿರಲಿಲ್ಲ. ಇಂತಹವರ ಉದ್ಧಾರಕ್ಕಾಗಿ ತಾನೇ ಅವತಾರವೆತ್ತಿದವರು ಜ್ಞಾನದೇವಾದಿಗಳು! ಒಂದು ದಿನ ನಿವೃತ್ತಿನಾಥನು ತಮ್ಮ ಅವತರಣದ ಉದ್ದೇಶವನ್ನು ಜ್ಞಾನದೇವನಿಗೆ ನೆನಪಿಸಿ, ಆ ಕಾರ್ಯಸಾಧನೆಗಾಗಿ ವೇದ ಉಪನಿಷತ್ತುಗಳ ಸಾರವಾದ ಭಗವದ್ಗೀತೆಗೆ ಜನಸಾಮಾನ್ಯರ ಭಾಷೆಯಲ್ಲಿ ಭಾಷ್ಯ ಬರೆಯಲು ಸೂಚಿಸಿದನು. ಅಂತೆಯೇ ಗುರುವಿನಾಣತಿಯನ್ನು ಶಿರಸಾವಹಿಸಿ ಎಲ್ಲರೊಡನೆ ಪ್ರವರಾ ನದೀ ತೀರದಲ್ಲಿದ್ದ ನೇವಾಸ ಕ್ಷೇತ್ರಕ್ಕೆ ಬಂದನು. ಆಗ ಧರ್ಮಗ್ರಂಥಗಳು ಸಂಸ್ಕೃತದಲ್ಲಿ ಇದ್ದವು. ಭಗವದ್ಗೀತೆಗೆ ಆಚಾರ್ಯ ಶಂಕರರ ಸಂಸ್ಕೃತ ಭಾಷ್ಯ ಮಾತ್ರ ಲಭ್ಯವಿತ್ತು. ಹಾಗಾಗಿ ಜ್ಞಾನದೇವನು ಜನಸಾಮಾನ್ಯರ ಮನೆಮಾತಾದ ಮರಾಠಿಯಲ್ಲಿ ಟೀಕೆಯನ್ನು ಬರೆಯಲು ನಿರ್ಧರಿಸಿದನು. ಆಗ ಅವನಿನ್ನೂ ೧೨ ವರ್ಷದ ಬಾಲಕ. ಪ್ರತಿದಿನ ರಚಿಸಿದ ಶ್ಲೋಕಗಳನ್ನು ಸೇರಿದ ಶ್ರೋತೃಗಳ ಮುಂದೆ ಸುಂದರ, ಸರಳ ಶೈಲಿಯಲ್ಲಿ ಮನಮುಟ್ಟುವಂತೆ ವಿವರಿಸುತಿದ್ದನು. ಹೀಗೆ ೭೦೦ ಶ್ಲೋಕಗಳ ಮೂಲ ಭಗವದ್ಗೀತೆಯು ಮರಾಠಿ ಭಾಷೆಯಲ್ಲಿ ೯೦೦೦ ಶ್ಲೋಕಗಳಲ್ಲಿ (ಅದು 'ಓವಿ' ಎಂಬ ಒಂದು ಮರಾಠಿ ಛಂದಸ್ಸು), ಭಾವಾರ್ಥ ದೀಪಿಕಾಎಂಬ ಹೆಸರಿನಿಂದ ರಚಿಸಲ್ಪಟ್ಟಿತು. ಮುಂದೆ ಇದು 'ಜ್ಞಾನೇಶ್ವರೀ' ಎಂದು ಪ್ರಸಿದ್ಧವಾಯಿತು. ಅರ್ಥಪೂರ್ಣ ಉಪಮೆಗಳು, ಸುಂದರ ಉದಾಹರಣೆಗಳು, ಹೃದಯಸ್ಪರ್ಶಿ ಶೈಲಿಯಿಂದ ಈ ಗ್ರಂಥವು ದೇಶಾದ್ಯಂತ ಪ್ರಖ್ಯಾತಿ ಪಡೆಯಿತು. ಹಲವಾರು ಭಾಷೆಗಳಲ್ಲಿ ಅನುವಾದಗೊಂಡಿತು. ಸಿಖ್ಖರ ಪವಿತ್ರ ಧರ್ಮಗ್ರಂಥ ಗುರುಗ್ರಂಥ ಸಾಹೇಬ್‌ನಲ್ಲಿಯೂ ಜ್ಞಾನೇಶ್ವರಿಯ ಹಲವು ಶ್ಲೋಕಗಳನ್ನು ಅಳವಡಿಸಲಾಗಿದೆ. ಈ ಗ್ರಂಥ ಪೂರ್ಣವಾದಾಗ ಜ್ಞಾನದೇವನ ವಯಸ್ಸು ಕೇವಲ ೧೫. ಸಹಸ್ರ ಸಹಸ್ರ ಸಂಖ್ಯೆಯ ಜನರು ಈ ಪ್ರವಚನಗಳನ್ನು ಕೇಳಿ ಧನ್ಯರಾದರು. ಭಕ್ತಿಮಾರ್ಗದ ಆಕರ್ಷಣೆ ಹೆಚ್ಚಿತು. ನಂತರ ಜ್ಞಾನದೇವನು ಅಮೃತಾನುಭವ ಎಂಬ ತಾತ್ತ್ವಿಕ ಗ್ರಂಥವನ್ನೂ, ಹರಿಪಾಠ ಸಹಿತ ಸುಮಾರು ೧೦೦೦ ಅಭಂಗಗಳನ್ನೂ ರಚಿಸಿದನು. ಇವೆಲ್ಲವೂ ಆಧ್ಯಾತ್ಮಿಕ ಜಗತ್ತಿನ ಅಮೂಲ್ಯ ಸಾಹಿತ್ಯವಾಗಿದ್ದು, ಅಪಾರ ಜನಮನ್ನಣೆಯನ್ನು ಪಡೆದಿವೆ.

ಭಕ್ತಿಮಾರ್ಗವು ಜನಸಾಮಾನ್ಯರಿಗೆ ಜಾತಿ ಮತ ಅಂತಸ್ತಿನ ಭೇದವಿಲ್ಲದೆ ಅನುಸರಿಸಬಹುದಾದ ಸುಲಭ ವಿಧಾನವೆಂದು ಮನಗಂಡ ಜ್ಞಾನದೇವನು ಭಕ್ತಿ ಪಂಥವನ್ನು ಬಲಪಡಿಸಿದನು. ವಾರಕರಿ ಸಂಪ್ರದಾಯದ ಮೂಲಕ ಅಸಂಖ್ಯ ಜನರು ಈ ಆಂದೋಲನದಲ್ಲಿ ಭಾಗಿಯಾದರು. ವಾರಕರಿ ಯಾತ್ರೆಯಲ್ಲಿ ಭಾಗವಹಿಸುತ್ತಿದ್ದವರ ಸಂಖ್ಯೆ ಹೆಚ್ಚುತ್ತಲೇ ಹೋಯಿತು. ಚೋಕಾಮೇಳ, ಗೋರ ಕುಂಬಾರ, ನರಸೀ ಮೆಹ್ತಾ, ವಿಸೋಭ ಖೇಚರ, ನಾಮದೇವ, ನರಹರಿ ಸೋನಾರ ಮುಂತಾದ ಸಂತರೂ ಜ್ಞಾನದೇವನ ಪರಿವಾರವನ್ನು ಸೇರಿದರು.

ಜ್ಞಾನೇಶ್ವರಿ ಗ್ರಂಥ ರಚನೆಯಾದ ಮೇಲೆ ಜ್ಞಾನದೇವಾದಿಗಳು ತಮ್ಮ ಭಕ್ತ–ಸಂತರೊಡಗೂಡಿ ತೀರ್ಥಯಾತ್ರೆಗೆ ಹೊರಟರು. ಹೋದಲ್ಲೆಲ್ಲಾ ಆಸ್ತಿಕರು ಅವರನ್ನು ಸ್ವಾಗತಿಸಿದರು. ಭಕ್ತಿಯಿಂದ ಪ್ರವಚನಗಳನ್ನು ಕೇಳಿದರು. ಹೀಗೆ ದೇಶದಾದ್ಯಂತ ತೀರ್ಥಯಾತ್ರೆಯೊಡನೆ ಜ್ಞಾನೇಶ್ವರಿಯ ಜ್ಞಾನಪ್ರಸಾರವೂ ನಡೆಯಿತು. ಕೊನೆಗೆ ತಂಡವು ಪಂಢರಾಪುರಕ್ಕೆ ಹಿಂದಿರುಗಿತು. ವಿಠ್ಠಲನನ್ನು ದರ್ಶಿಸಿ ಎಲ್ಲರೂ ಸಂತೃಪ್ತರಾದರು.

ಜ್ಞಾನದೇವನಿಗೆ ತನ್ನ ಕರ್ತವ್ಯಗಳು ಮುಗಿದು, ಇನ್ನು ಈ ಜಡ ದೇಹವನ್ನು ತ್ಯಜಿಸಬೇಕೆನ್ನುವ ಭಾವನೆಯುದಿಸಿತು. ಅಣ್ಣ ಹಾಗೂ ಗುರುವಾದ ನಿವೃತ್ತಿನಾಥನಲ್ಲಿ ತನ್ನ ವಿಚಾರವನ್ನು ನಿವೇದಿಸಿದನು. ತಮ್ಮ ಅವತಾರ ಕೊನೆಗೊಳ್ಳುವ ಸಮಯ ಸನ್ನಿಹಿತವಾಗುತ್ತಿರುವುದು ಅವನಿಗೂ ತಿಳಿದಿತ್ತು. ಜ್ಞಾನದೇವನ ನಿಶ್ಚಯ ತಿಳಿದ ಸೋಪಾನ, ಮುಕ್ತಾಬಾಯಿ ಮತ್ತು ಶಿಷ್ಯವೃಂದವೆಲ್ಲ ಬಹಳ ಕಳವಳಪಟ್ಟಿತು.

೧೨೯೬ನೆ ಇಸವಿ ಕಾರ್ತಿಕ ಮಾಸದ ಕೃಷ್ಣ ಪಕ್ಷದ ತ್ರಯೋದಶಿಯನ್ನು ತನ್ನ ಸಜೀವ ಸಮಾಧಿಗಾಗಿ ಜ್ಞಾನದೇವನು ಆರಿಸಿಕೊಂಡನು. ಆಳಂದಿಯ ಸಿದ್ದೇಶ್ವರ ಮಂದಿರದ ಬಳಿ ಗುಹೆಯೊಂದರಲ್ಲಿ ಸಮಾಧಿಗೆ ಸಿದ್ಧತೆಗಳಾದವು. ಸಹಸ್ರಾರು ಭಕ್ತರು ಸೇರಿದ್ದರು. ಎಲ್ಲರೂ ಶೋಕವಿಹ್ವಲರಾಗಿದ್ದರು. ಇಷ್ಟುದಿನ ತಮಗೆ ಆಪ್ತನಾಗಿ ಮಾರ್ಗದರ್ಶನ ನೀಡುತ್ತಿದ್ದ ಪ್ರಿಯ ಗುರುವಿನ ವಿಯೋಗ ಸಹಿಸಲಾರದೆ ಕಣ್ಣೀರ್ಗರೆಯುತ್ತಿದ್ದರು. ನಿವೃತ್ತಿನಾಥನೂ, ಸೋಪಾನ, ಮುಕ್ತಾಬಾಯಿಯರೂ ತುಂಬಾ ವ್ಯಥೆಪಡುತ್ತಿದ್ದರು. ಸಮಾಧಿಯ ಸಮಯ ಬಂತು. ಅಪೂರ್ವ ಕಾಂತಿಯಿಂದ ಬೆಳಗುತ್ತಿದ್ದ ಜ್ಞಾನದೇವನು ಎಲ್ಲರಿಗೂ ನಮಸ್ಕರಿಸಿದನು. ಗುರು ನಿವೃತ್ತಿನಾಥನಿಗೆ ವಂದಿಸಿದನು. ಭಾರವಾದ ಹೃದಯದಿಂದ ನಿವೃತ್ತಿನಾಥನು ಜ್ಞಾನದೇವನನ್ನು ಸಮಾಧಿಸ್ಥಳಕ್ಕೆ ಕರೆದೊಯ್ದನು. ಸಮಾಧಿಸ್ಥಳದಲ್ಲಿ ಪೀಠಾಸನವೊಂದನ್ನು ನಿರ್ಮಿಸಲಾಗಿತ್ತು. ಜ್ಞಾನದೇವನು ಅದರಲ್ಲಿ ಕುಳಿತು ಕಣ್ಣುಮುಚ್ಚಿ ಪಾಂಡುರಂಗನ ಧ್ಯಾನದಲ್ಲಿ ಲೀನನಾದನು. ನಂತರ ನಿವೃತ್ತಿನಾಥನು ಸಮಾಧಿಯ ದ್ವಾರವನ್ನು ಕಲ್ಲುಹಲಗೆಯಿಂದ ಮುಚ್ಚಿದನು. ಸೇರಿದ ಶೋಕಾಕುಲ ಜನರು ಕಣ್ಣೀರ್ಗರೆ



ಆಳಂದಿ, ಜ್ಞಾನದೇವನ ಸಮಾಧಿ ಇರುವ ಸ್ಥಳ

ಯುತ್ತ ಜೋರಾಗಿ ಜಯಘೋಷವನ್ನು ಮಾಡುತಿದ್ದರು. ಸಮಾಧಿಗೆ ಕೈಮುಗಿದು ಪತ್ರಪುಷ್ಪಗಳಿಂದ ಅರ್ಚಿಸಿದರು. ಭಜನೆ ಸಂಕೀರ್ತನೆಗಳಿಂದ ತಮ್ಮ ಅಗಲಿದ ಗುರುವಿಗೆ ಶ್ರದ್ಧಾಂಜಲಿಯನ್ನು ನೀಡಿದರು. ಕೇವಲ ೨೧ ವರ್ಷಗಳ ಆಯುಷ್ಯದಲ್ಲಿ ಅತ್ಯುನ್ನತ ಆಧ್ಯಾತ್ಮಿಕ ಜ್ಞಾನವನ್ನು ಗಳಿಸಿ, ದೇಶದಾದ್ಯಂತ, ಜಾತಿ-ಪಂಥ, ಬಡವ-ಬಲ್ಲಿದ, ಉಚ್ಚ-ನೀಚ ಭೇದವಿಲ್ಲದೆ, ಎಲ್ಲರ ಉದ್ಧಾರವನ್ನು ಬಯಸಿ, ಆಧ್ಯಾತ್ಮಿಕ ಜ್ಞಾನಸುಧೆಯನ್ನು ಉಣಬಡಿಸಿದ ಮಹಾನ್ ಚೇತನ ಹೀಗೆ ವಿಶ್ವಚೈತನ್ಯದಲ್ಲಿ ಒಂದಾಯಿತು.

ಜ್ಞಾನದೇವನ ಈ ಸಮಾಧಿ ಸ್ಥಳವು ಸಂಜೀವನ ಸಮಾಧಿ ಮಂದಿರವೆಂದು ಪ್ರಸಿದ್ಧವಾಗಿದೆ, ಪವಿತ್ರ ತೀರ್ಥಕ್ಷೇತ್ರವಾಗಿದೆ. ಅಪಾರ ಸಂಖ್ಯೆಯ ಭಕ್ತಜನರ ಶ್ರದ್ಧಾಕೇಂದ್ರವಾಗಿದೆ. ಈಗಲೂ ಆತನು ತಮ್ಮ ಇಷ್ಟಾರ್ಥಗಳನ್ನು ನೆರವೇರಿಸಿ, ಮಾರ್ಗದರ್ಶನ ನೀಡುವನೆಂಬ ನಂಬಿಕೆಯಿಂದ ಸಹಸ್ರಾರು ಭಕ್ತರು ಇಲ್ಲಿಗೆ ಭೇಟಿ ನೀಡುತ್ತಾರೆ. ಶಾಂತಿ-ನೆಮ್ಮದಿಗಳ ಅನುಭೂತಿಯನ್ನು ಪಡೆಯುತ್ತಾರೆ.

ಸಮಾಜದ ಎಲ್ಲ ವರ್ಗಗಳ ಜನರೂ ಸೇರಿ, ಯಾವುದೇ ತಾರತಮ್ಯವಿಲ್ಲದೆ ದೇವರ ನಾಮಸ್ಮರಣೆ, ಕೀರ್ತನೆ, ಭಜನೆಗಳನ್ನು ಹಾಡುತ್ತಾ ಪಂಢರಾಪುರದ ಯಾತ್ರೆ ಮಾಡಿ ಪಾಂಡುರಂಗ ವಿಠಲನ ದರ್ಶನ ಮಾಡುವ ವಾರಕರಿ ಸಂಪ್ರದಾಯವು ಜ್ಞಾನದೇವನ ಪ್ರೋತ್ಸಾಹ, ಪ್ರಯತ್ನಗಳಿಂದ ಒಂದು ವಿಶಾಲ ಭಕ್ತಿ ಆಂದೋಲನದ ಸ್ವರೂಪವನ್ನು ಪಡೆಯಿತು. ಹೆಚ್ಚು ಹೆಚ್ಚು ಶ್ರದ್ಧಾಳುಗಳು ಭಾಗಿಯಾಗತೊಡಗಿದರು. ಪ್ರತಿವರ್ಷ ಆಷಾಢ ಮತ್ತು ಕಾರ್ತಿಕ ಏಕಾದಶಿಯಂದು ಪಂಢರಾಪುರ ಸೇರುವಂತೆ ಈ ಯಾತ್ರೆಗಳನ್ನು ಆಯೋಜಿಸಲಾಗುತ್ತದೆ. ಯಾತ್ರೆಯ ಪ್ರಾರಂಭ ಆಳಂದಿಯಿಂದ. ಆಳಂದಿಯಲ್ಲಿ ಜ್ಞಾನದೇವನ ಪಾದುಕೆಗಳನ್ನು ಪಲ್ಲಕ್ಕಿಯಲ್ಲಿಟ್ಟು ಭಜನೆ ಮಾಡುತ್ತಾ ಸಾಗುತ್ತಾರೆ. ಬೇರೆ ಬೇರೆ ಊರುಗಳಿಂದ ಭಜನಾ ತಂಡಗಳು, ಸಂತರ ಪಲ್ಲಕ್ಕಿಗಳು ಮಾರ್ಗದಲ್ಲಿ ಯಾತ್ರೆಯನ್ನು ಸೇರಿಕೊಳ್ಳುತ್ತವೆ. ವಯಸ್ಸಿನ ಅಂತರವಿಲ್ಲದೆ, ಹೆಣ್ಣು ಗಂಡು ಭೇದವಿಲ್ಲದೆ, ಲಕ್ಷಗಟ್ಟಲೆ ವಾರಕರಿಗಳು ನೂರಾರು ಮೈಲಿ ಕಾಲ್ನಡಿಗೆಯಲ್ಲಿ ನಡೆದು ವಿಠಲನ ದರ್ಶನ ಪಡೆಯುತ್ತಾರೆ. ಧನ್ಯತೆಯನ್ನು ಅನುಭವಿಸುತ್ತಾರೆ.

* * *

ಹೌದು. ಅದೇ ಪಂಢರಾಪುರಕ್ಕೆ ಸಾಗರದೋಪಾದಿಯಲ್ಲಿ ಹೊರಟಿರುವ ವಾರಕರಿಗಳ ಯಾತ್ರೆ ! ಪಲ್ಲಕ್ಕಿಯಲ್ಲಿ ಪೂಜ್ಯ ಸಂತ ಜ್ಞಾನದೇವನ ಪಾದುಕೆಗಳು ವಿರಾಜಮಾನವಾಗಿವೆ. ಸುತ್ತ ಭಕ್ತರ ಭಜನಾ ತಂಡಗಳು ಭಜನೆ ಕೀರ್ತನೆಗಳ ಆನಂದಸಾಗರದಲ್ಲಿ ತೇಲಾಡುತ್ತಿವೆ. ಎಲ್ಲರೂ ಪಾಂಡುರಂಗ ವಿಠಲನ ದರ್ಶನಕ್ಕೆ ಕಾತರರಾಗಿ ಧಾವಿಸುತ್ತಿದ್ದಾರೆ. ಘೋಷಣೆಗಳು ಮೊಳಗುತ್ತಿವೆ. 'ಜಯ್ ವಿಠಲ್- ಹರಿ ವಿಠಲ್, ಜ್ಞಾನದೇವ್ ಮಹಾರಾಜ್ ಕಿ ಜಯ್!' ಬನ್ನಿ, ನಾವೂ ಧ್ವನಿಗೂಡಿಸೋಣ. ಸಂತ್ ಜ್ಞಾನದೇವ ಮಹಾರಾಜ್ ಕೀ ಜಯ್ !!

ದೃಢ ವಿಶ್ವಾಸ ಮತ್ತು ದೈನ್ಯದಿಂದ ಸಾಧಕನು ಪರಮಾತ್ಮನ ಕರುಣೆಗಾಗಿ ಪ್ರಾರ್ಥಿಸಬೇಕು. ಆಗ ಸಕಾಲದಲ್ಲಿ ಗುರುವಿನ ದರ್ಶನವಾಗುವುದು. ಅವನ ಪ್ರಾರಬ್ಧ ಕರ್ಮಫಲಗಳು ಸಂಪೂರ್ಣ ಕ್ಷಯವಾಗಿ, ಹೊಸ ಕರ್ಮಗಳು ಫಲಹೀನವಾದಾಗ ಗುರುವು ನೇರವಾಗಿ, ರಾತ್ರಿಯ ಕತ್ತಲು ಕಳೆದು, ಸೂರ್ಯೋದಯದೊಡನೆ ಬೆಳಕಾಗುವಂತೆ ಸಹಜವಾಗಿ ಪ್ರಕಟವಾಗುತ್ತಾನೆ. ಇದೆಲ್ಲದಕ್ಕೂ ಭಗವಂತನ ನಿರಂತರ ಸ್ಮರಣೆಯಲ್ಲದೆ ಅನ್ಯ ಮಾರ್ಗವಿಲ್ಲ.

— ಜ್ಞಾನದೇವ